


ಯುಎಇನಲ್ಲಿ ಕ್ರಿಕೆಟ್ ಸಂಭ್ರಮ ಪಸರಿಸುವಂತೆ ಕಾಣಿಸುತ್ತಿರುವ 'ಡೆಲ್ಲಿ ಕ್ಯಾಪಿಟಲ್ಸ್' ತಂಡದ ಬಸ್

2013ರಲ್ಲಿ ನ್ಯೂಜಿಲೆಂಡ್ ಎದುರು ಎಂಟನೇ ಕ್ರಮಾಂಕದಲ್ಲಿ ಬಾಂಗ್ಲಾದೇಶದ ಸೊಹಾಗ್ ಗಾಜಿ, 2002ರಲ್ಲಿ ಇಂಗ್ಲೆಂಡ್ ಎದುರು ಅಜಿತ್ ಅಗರ್ಕರ್, 2010ರಲ್ಲಿ ಪಾಕಿಸ್ತಾನ ವಿರುದ್ಧ ಇಂಗ್ಲೆಂಡ್‌ನ ಸ್ಟುವರ್ಟ್ ಬ್ರಾಡ್ ಹೀಗೆ ಅನೇಕ ಆಟಗಾರರು ಬಾಲಂಗೋಚಿಗಳಾಗಿ ಬಂದು ಶತಕ ಹೊಡೆದ ಉದಾಹರಣೆಗಳಿವೆ.

### ಬದುಕು ಬದಲಿಸಿದ 'ಐಪಿಎಲ್'

ಐಪಿಎಲ್ ಹಲವಾರು ಆಟಗಾರರಿಗೆ ಅದ್ಭುತ ಕ್ರೀಡಾಜೀವನ ರೂಪಿಸಿಕೊಳ್ಳಲು ವೇದಿಕೆಯಾಗಿದೆ. ರಾಜ್ಯ ಮತ್ತು ರಾಷ್ಟ್ರೀಯ ಕ್ರಿಕೆಟ್ ತಂಡದಲ್ಲಿ ಆಡಲು ಅವಕಾಶವೇ ಸಿಗದಿದ್ದಾಗ ಐಪಿಎಲ್‌ನಲ್ಲಿ ಸ್ಥಾನ ಪಡೆದು ಅಚ್ಚರಿ ಮೂಡಿಸಿದವರು ಅನೇಕರಿದ್ದಾರೆ. ಕರ್ನಾಟಕದ ಕೆ.ಸಿ. ಕಾರ್ಯಪ್ಪ ಇದಕ್ಕೊಂದು ಉದಾಹರಣೆ.

ಅದು 2015ರಲ್ಲಿ ನಡೆದ ಐಪಿಎಲ್ ಟೂರ್ನಿಯ ಹರಾಜು ಪ್ರಕ್ರಿಯೆ. ಕರ್ನಾಟಕ ಪ್ರೀಮಿಯರ್ ಲೀಗ್ (ಕೆಪಿಎಲ್) ಆಡಿ ಗಮನ ಸೆಳೆದಿದ್ದ ಸ್ಪಿನ್ನರ್ ಕಾರ್ಯಪ್ಪ ಅವರನ್ನು 'ಕೋಲ್ಕತ್ತ ನೈಟ್ ರೈಡರ್ಸ್' ತಂಡ ದುಬಾರಿ ಬೆಲೆಗೆ ಖರೀದಿ ಮಾಡಿತ್ತು. ನಂತರ 'ಕಿಂಗ್ಸ್ ಇಲೆವೆನ್ ಪಂಜಾಬ್' ಮತ್ತು 'ರಾಜಸ್ಥಾನ ರಾಯಲ್ಸ್' ತಂಡದಲ್ಲಿ ಅವಕಾಶ ಗಿಟ್ಟಿಸಿದರು. ಕಾರ್ಯಪ್ಪ ಇದುವರೆಗೆ ರಾಷ್ಟ್ರೀಯ ತಂಡದಲ್ಲಿ ಆಡಿಲ್ಲ. ಆದರೆ, ಐಪಿಎಲ್ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ.

ವೈಯಕ್ತಿಕ ಬದುಕಿನಲ್ಲಿ ಅನೇಕ ಕಷ್ಟಗಳನ್ನು ಎದುರಿಸಿ, ಕುಟುಂಬ ಆರ್ಥಿಕವಾಗಿ ಸದೃಢ ಇಲ್ಲದಿದ್ದರೂ ಸಾಧಿಸಬೇಕೆನ್ನುವ ಛಲವನ್ನಷ್ಟೇ ಬಂಡವಾಳ ಮಾಡಿಕೊಂಡು ಅನೇಕರು ರಾಜ್ಯ, ರಾಷ್ಟ್ರೀಯ, ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಹೆಸರು ಮಾಡಿದ್ದಾರೆ. ಐಪಿಎಲ್‌ನಲ್ಲಿ ಕೋಟ್ಯಂತರ ಹಣ ಗಳಿಸಿದ್ದಾರೆ.

ಗಣಿ ಕಾರ್ಮಿಕ ತಿಲಕ್ ಯಾದವ್ ಪುತ್ರ ಹಾಗೂ ವೇಗದ ಬೌಲರ್ ಉಮೇಶ ಯಾದವ್, ರೈತನ ಮಗ ಮೊಹಮ್ಮದ್ ಶಮಿ, ಕ್ರಿಕೆಟ್ ಅಭ್ಯಾಸಕ್ಕಾಗಿ ನಿತ್ಯ 84 ಕಿ.ಮೀ. ಪ್ರಯಾಣಿಸುತ್ತಿದ್ದ ವೀರೇಂದ್ರ ಸೆಹ್ವಾಗ್, ₹35 ಕೂಲಿ ಸಲುವಾಗಿ ದುಡಿಯುತ್ತಿದ್ದ ಮುಸಾ ಪಟೇಲ್ ಪುತ್ರ ಮುನಾಫ್ ಪಟೇಲ, ರೈಲ್ವೆಯಲ್ಲಿ ಟಿಕೆಟ್ ಕಲೆಕ್ಟರ್ ಆಗಿದ್ದ ಮಹೇಂದ್ರ ಸಿಂಗ್ ಧೋನಿ, ಬಸ್ ಚಾಲಕನ ಪುತ್ರ ವಾಸೀಮ್ ಜಾಫರ್, ವಾಚ್‌ಮನ್ ಪುತ್ರ

## ರಾಷ್ಟ್ರೀಯ ತಂಡಕ್ಕೆ ಐಪಿಎಲ್ ರಹದಾರಿ

ನಾನು ದೇಶಿ ಟೂರ್ನಿಗಳಲ್ಲಿ ಆಡುತ್ತಿದ್ದ ದಿನಗಳಲ್ಲಿ ನಮ್ಮಲ್ಲಿನ ಪ್ರತಿಭೆ ತೋರಿಸಲು, ಕಡಿಮೆ ಸಮಯದಲ್ಲಿ ರಾಷ್ಟ್ರೀಯ ತಂಡದಲ್ಲಿ ಅವಕಾಶ ಪಡೆಯಲು ಈಗಿನಷ್ಟು ಅವಕಾಶಗಳು ಆಗ ಇರಲಿಲ್ಲ.

ಈಗ ದೇಶಿ ಟೂರ್ನಿಗಳ ಜೊತೆಗೆ, ಐಪಿಎಲ್ ಎಂಬ ದೊಡ್ಡ ವೇದಿಕೆಯಿದೆ. ಈ ಟೂರ್ನಿಯನ್ನು ಜಗತ್ತು ಕಣ್ಣರಳಿಸಿಕೊಂಡು ನೋಡುತ್ತದೆ. ಅನೇಕ ಫ್ರಾಂಚೈಸ್‌ಗಳು ಯುವ ಆಟಗಾರರಲ್ಲಿನ ಪ್ರತಿಭೆಯನ್ನು ಗುರುತಿಸಲು ಪ್ರತಿಭಾ ಶೋಧ ಕಾರ್ಯಕ್ರಮಗಳನ್ನು ನಡೆಸುತ್ತವೆ. ಇದರಿಂದಾಗಿ ಸಣ್ಣ ವಯಸ್ಸಿನಲ್ಲಿ ಅನೇಕ ಆಟಗಾರರು ಐಪಿಎಲ್‌ನಲ್ಲಿ ಅವಕಾಶ ಪಡೆದಿದ್ದಾರೆ. ಪ್ರತಿಷ್ಠಿತ ದೇಶಿ ಟೂರ್ನಿಗಳಲ್ಲಿ ಕಾಣಿಸಿಕೊಳ್ಳದಿದ್ದರೂ ಐಪಿಎಲ್ ತಂಡಗಳಲ್ಲಿ ಅವಕಾಶ ಗಿಟ್ಟಿಸಿಕೊಳ್ಳುತ್ತಾರೆ.

ದೇಶಿ ಟೂರ್ನಿಗಳಲ್ಲಿ ಆಯಾ ರಾಜ್ಯಗಳ ಆಟಗಾರರ ಜೊತೆ ಮಾತ್ರ ಡ್ರೆಸ್ಸಿಂಗ್ ಕೊಠಡಿ ಹಂಚಿಕೊಳ್ಳುವವರು ಐಪಿಎಲ್‌ನಲ್ಲಿ ಸ್ಥಾನ ಪಡೆದ ಬಳಿಕ ವಿಶ್ವ ಶ್ರೇಷ್ಠ ಆಟಗಾರರ ಜೊತೆ ದಿನಗಳನ್ನು ಕಳೆಯುತ್ತಾರೆ. ಇದರಿಂದಾಗಿ ಅವರ ಅನುಭವದ ಲಾಭ ಪಡೆದುಕೊಳ್ಳಲು ಸಾಧ್ಯವಾಗುತ್ತದೆ.

ಐಪಿಎಲ್‌ನಲ್ಲಿ ಹಿರಿಯ ಹಾಗೂ ವಿದೇಶಿ ಆಟಗಾರರ ಜೊತೆ ಗಳಿಸಿಕೊಳ್ಳುವ ಅನುಭವ ಅಂತರರಾಷ್ಟ್ರೀಯ ಮಟ್ಟದ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ತೋರಲು ನೆರವಾಗುತ್ತದೆ. ಐಪಿಎಲ್ ಹಾಗೂ ಟೆಸ್ಟ್ ವಿಭಿನ್ನ ಮಾದರಿಯಾದ ಕಾರಣ ಟೆಸ್ಟ್‌ಗೆ ಚುಟುಕು ಕ್ರಿಕೆಟ್‌ನ ಕೌಶಲ ನೆರವಾಗುತ್ತದೆ ಎಂದು ಖಚಿತವಾಗಿ ಹೇಳಲಾರೆ.

ಅಂತರರಾಷ್ಟ್ರೀಯ ಟ್ವೆಂಟಿ–20, ಟೆಸ್ಟ್ ಮತ್ತು ಏಕದಿನ ತಂಡಗಳಲ್ಲಿ ಆಡುವ ಭಾರತದ ಈಗಿನ ಬಹುತೇಕ ಆಟಗಾರರು ಐಪಿಎಲ್‌ನಲ್ಲಿ ಆಡಿದ ಅನುಭವ ಹೊಂದಿದ್ದಾರೆ. ಬೌಲರ್‌ಗಳು ಕೂಡ ಚುಟುಕು ಕ್ರಿಕೆಟ್‌ನಲ್ಲಿ ಬ್ಯಾಟಿಂಗ್‌ನಲ್ಲಿ ಮಿಂಚಿದ್ದಾರೆ. ಈ ಅನುಭವದ ಬಲ ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಗೆ ಅನುಕೂಲವಾಗಿದೆ. ಹಿಂದೆಯೂ ಬಹಳಷ್ಟು ಬಾಲಂಗೋಚಿಗಳು ಪಂದ್ಯವನ್ನು ಗೆಲ್ಲಿಸಿಕೊಟ್ಟ ಉದಾಹರಣೆಗಳಿವೆ.

**-ಸೋಮಶೇಖರ ಶಿರಗುಪ್ಪಿ**
ಕರ್ನಾಟಕ ಕ್ರಿಕೆಟ್ ತಂಡದ ಮಾಜಿ
ಆಟಗಾರ ಹಾಗೂ ಕೋಚ್

